ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.319/2023**

**CW-1 PW-1**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಣ್ಣ ಈರೇಶ |
| ತಂದೆ | ಃ | ಚಂದಪ್ಪ |
| ವಯಸ್ಸು | ಃ | 39 |
| ಉದ್ಯೋಗ | ಃ | ಪಿ ಎಸ್ ಐ ಸಂಚಾರ ಠಾಣೆ |
| ವಾಸಸ್ಥಳ | ಃ | ರಾಯಚೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07-08-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ನಾನು ದಿನಾಂಕ 02.03.2021 ರಿಂದ ದಿನಾಂಕ 08.08.2023 ವರೆಗೆ ಗಬ್ಬೂರು ಠಾಣೆಯಲ್ಲಿ ಪಿ ಎಸ್ ಐ ಎಂದು ಕೆಲಸ ಮಾಡಿರುತ್ತೇನೆ.

ದಿನಾಂಕ **01-06-2022** ರಂದು ಮಧ್ಯಾಹ್ನ **03.30** ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ ಹೆಗ್ಗಡಿದಿನ್ನಿ ಗ್ರಾಮದ ಶರಣಪ್ಪ ಹೊಟೇಲ್ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಜೂಜಾಟ ಆಡುತ್ತಿದ್ದ ಬಾತ್ಮಿ ಮೇರೆಗೆ ತಕ್ಷಣ ಸಿಬ್ಬಂದಿ ಮೂಲಕ ಪಂಚರನ್ನು ಬರ ಮಾಡಿಕೊಂಡು ಮಧ್ಯಾಹ್ನ **03.30** ಗಂಟೆಗೆ ಸಿಬ್ಬಂದಿ ಮತ್ತು ಪಂಚರ ಜೊತೆ ಸ್ಥಳಕ್ಕೆ ಹೋಗಿ ಹೊರ ವಲಯದಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರು ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ನಸಿಬಿನ ಜೂಜಾಟ ಹಣ ಕಟಿದ್ದಲ್ಲಿ **1** ರೂ ಗೆ **80** ರೂ ಕೊಡುವುದಾಗಿ ಹೇಳಿ ಜನರಿಂದ ಹಣ ಪಡೆದು ನಂಬರ ಬರೆದುಕೊಳ್ಳುತ್ತಿರುವುದು ತಕ್ಷಣ ದಾಳಿ ಮಾಡಿದಾಗ ಜನರು ಓಡಿ ಹೋಗಿದ್ದು ಮಟಕಾ ಜೂಜಾಟ ನಂ. ಬರೆಯುತ್ತಿದ್ದ ವ್ಯಕ್ತಿ ಸಿಕ್ಕಿದ್ದು ಆತನನ್ನು ವಿಚಾರಣೆ ಮಾಡಿದಾಗ ಆತನ ಹೆಸರು ಶರಣಪ್ಪ ತಂದೆ ರುದ್ರಪ್ಪ ಎಂದು ತಿಳಿಸಿದ್ದು ಆತ ಅಂಗ ಶೋದನೆ ಮಾಡಲಾಗಿ ಆತನಿಂದ ಒಂದು ಪೆನ್ನು, ಚೀಟಿ ಮತ್ತು ಮಟಕಾ ಜೂಜಾಟದ ಹಣ ರೂ.**1630/-** ಸಿಕ್ಕಿದ್ದು ಜೂಜಾಟದ ಪಟ್ಟಿ ದೇವದುರ್ಗದ ವಯೂರಸ್ವಾಮಿಗೆ ಕೊಡುವುದಾಗಿ ಹೇಳಿದ್ದು ಆತನಿಂದ ಜಪ್ತಿ ಮಾಡಿಕೊಂಡ ವಸ್ತುಗಳನ್ನು ಮತ್ತ ಆರೋಪಿ ಜೊತೆ ಠಾಣೆಗೆ ಬಂದು ಠಾಣಾಧಿಕಾರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತೇನೆ.

ಪಂಚನಾಮೆಯನ್ನು ನಿಪಿ-**1** ಎಂದು ಸಹಿಯನ್ನು ನಿಪಿ-**1** ಎ ಎಂದು, ಜ್ಞಾಪನ ಪತ್ರವನ್ನು ನಿಪಿ-**2** ಎಂದು ಸಹಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಆತನ ಗುರತಿನ ಬಗ್ಗೆ ವಕೀಲರು ತಕರಾರು

ಇಲ್ಲವೆಂದು ಹೇಳಿರುತ್ತಾರೆ. ಜಪ್ತಿ ಮಾಡಿದ ಮಟಕಾ ಚೀಟಿ, ಬಾಲಪೆನ್ನನ್ನು ಮತ್ತು ಹಣವನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **HK** ವಕೀಲರಿಂದ.</u>

ನಮ್ಮ ಸಿಬ್ಬಂದಿ ದೇವೆಂದ್ರ ಚಾಸಾ-5 ಪಂಚರನ್ನು ಠಾಣೆಗೆ ಕರೆ ತಂದಿರುತ್ತಾರೆ. ಸದರಿ ಚಾಸಾ-5 ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ಜ್ಞಾಪನ ಪತ್ರ ಮತ್ತು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ನಿಪಿ-1 ರಲ್ಲಿ ಮಧ್ಯಾಹ್ನ 03.30 ಗಂಟೆಗೆ ಪಂಚರು ಠಾಣೆಗೆ ಬಂದು ಹಾಜರು ಆಗಿರುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಪಂಚನಾಮೆಯಲ್ಲಿ ಸಂಜೆ 03.30 ಗಂಟೆಗೆ ಹೊಟೇಲ್ ಮುಂದೆ ಸಾರ್ಜಜನಿಕ ಸ್ಥಳದಲ್ಲಿ ಹೋಗಿ ಮರೆಯಲ್ಲಿ ಜೀಪು ನಿಲ್ಲಿಸಿರುವುದಾಗಿ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿ 04.30 ಗಂಟೆ ಎಂದು ನಮೂದು ಮಾಡುವ ಬದಲು ತಪ್ಪಾಗಿ 03.30 ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಳಿ ಪ್ರಕ್ರಿಯೇ ಒಂದು ತಾಸು ಆಗಿರುತ್ತದೆ. ಲ್ಯಾಪಟಾಪ್ ಅಲ್ಲಿ ಪಂಚನಾಮೆ ಬೆರಳಚ್ಚು ಮಾಡಿದ ನಮ್ಮ ಸಿಬ್ಬಂದಿ ಚಾಸಾ-6 ಶಬ್ಬೀರ್ ಆಗಿರುತ್ತಾರೆ. ಪಂಚನಾಮೆಯನ್ನು ಸ್ಥಳದಲ್ಲಿ ಪ್ರಿಂಟ್ ತೆಗೆಯಲಾಗಿತ್ತು. ಸ್ಥಳದಲ್ಲಿಯ ಪೊರ್ಟೆಬಲ್ ಪ್ರಿಂಟರ್ ಮೂಲಕ ತೆಗೆಯಲಾಗಿರುತ್ತದೆ. ಚೀಟಿಯಲ್ಲಿ ಯಾವ ನಂಬರಿನ ಎಷ್ಟು ಹಣ ನಮೂದು ಮಾಡಲಾಗಿತ್ತು ಮತ್ತು ಪೆನ್ನಿನ್ನ ಕಂಪನಿ ಹೆಸರು ಮತ್ತು ಹಣದ ಮುಖ ಬೆಲೆ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲಿ1 ನೇ ಆರೋಪಿ ಹೇಳಿಕೆ ಮೇರೆಗೆ ಮಯೂರ ಸ್ವಾಮಿ ಎಂದು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಗುನ್ನ ನಂ.42/2022 ರಲ್ಲಿ ಬೂದೆಪ್ಪ ತಂದೆ ಮಾರೆಪ್ಪ ಇವರನ್ನು ಪಂಚರನ್ನಾಗಿ ಮಾಡಲಾಗಿದೆ ಎಂದರೆ ಸರಿ. ಮಯೂರ ಸ್ವಾಮಿ ದೇವದುರ್ಗ ತಾಲುಕಿನ ಜೆಡಿಎಸ್ ಪಕ್ಷದ ಮುಖಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಯೂರ ಸ್ವಾಮಿ ದೇವದುರ್ಗ ತಾಲೂಕಿನಲ್ಲಿ ಮಟಕಾ ಜೂಜಾಟ ತಡೆಯುವಂತೆ ಎಸ್.ಪಿ ಇವರಿಗೆ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಯೂರ ಸ್ವಾಮಿ ಎಸ್.ಪಿ ಇವರಿಗೆ ದೂರು ನೀಡಿದ್ದರಿಂದ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.319/2023**

**PW-2 CW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬೂದೆಪ್ಪ |
| ತಂದೆ | ಃ | ಮರೆಪ್ಪ |
| ವಯಸ್ಸು | ಃ | 32 |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07.08.2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮುಮಾಗಳನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಪಂಚನಾಿಮಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 01-06-2022 ರಂದು ಸಂಜೆ 04.30 ರಿಂದ 05.30 ಗಂಟೆ ವರೆಗೆ ಘಟನ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಮಟಕಾ ಚೀಟಿ, ಬಾಲಪೆನ್ನು ಮತ್ತು ಹಣವನ್ನು ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.319/2023**

**PW-3 CW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರವಿ ಉರ್ಫ ರವೀಂದ್ರ |
| ತಂದೆ | ಃ | ಬಸ್ಸಪ್ಪ |
| ವಯಸ್ಸು | ಃ | 45 |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07.08.2025** |

---

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಮುಮಾಗಳನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಪಂಚನಾೆಮಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 01-06-2022 ರಂದು ಸಂಜೆ 04.30 ರಿಂದ 05.30 ಗಂಟೆ ವರೆಗೆ ಘಟನ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಮಟಕಾ ಚೀಟಿ, ಬಾಲಪೆನ್ನು ಮತ್ತು ಹಣವನ್ನು ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.